

ಕಾಣುವ, ನಮ್ಮ ಕೈಗೆಟಕುವ ದರದಲ್ಲಿ ಬೆಳ್ಳಿಯ ಆಭರಣ ಧರಿಸಬಹುದು. ಇದೀಗ ಬೆಳ್ಳಿ ಕೂಡ ಬೇರೆ ಬೇರೆ ಫಿನಿಶ್‌ನಲ್ಲಿ ಲಭ್ಯವಿದೆ. ಅದೇ ಬಂಗಾರದ ರೀತಿಯಲ್ಲಿ ರೋಸ್ ಗೋಲ್ಡ್, ಆಕ್ಸಿಡೈಸ್ಡ್‌ನಲ್ಲಿ ಬೆಳ್ಳಿ ಆಭರಣಗಳು ಶೋಭಿಸುತ್ತದೆ.

ಬೆಳ್ಳಿ ಆಭರಣಗಳಲ್ಲಿ ಹಲವು ವಿಧ.

- ಪೆಂಡೆಂಟ್ ಸಿಲ್ವರ್ ಫಿನಿಶ್ ಆಭರಣ
- ಹವಳ ಪೋಣಿಸಿದ ಪೆಂಡೆಂಟ್/ಸರಗಳು
- ರೂಬಿ/ ಎಮರಾಲ್ಡ್ ಹೋಲಿಕೆಯ ಹರಳು ಹಾಕಿದ ಆಭರಣಗಳು
- ದಾರದಲ್ಲಿ ಹೆಣೆದು ಮಾಡಿದ ಬೆಳ್ಳಿಯ ವಿನ್ಯಾಸ
- ಫ್ಲೆಕ್ಸಿಬಲ್ ರಿಂಗ್ ಚೈನ್ ಅಳವಡಿಸಿದ ಸರ
- ಪೈಪ್‌ನಂತಹ ವಿನ್ಯಾಸದ ಆಭರಣ
- ಎರಡು ಎಳೆ, ಮೂರು ಎಳೆ ಬೆಳ್ಳಿಯ ಗುಂಡುಗಳ ಸರ
- ಫಳ ಫಳ ಹೊಳೆಯುವ ಹರಳು ಹಾಕಿದ, ವಜ್ರದ ಆಭರಣ ಹೋಲುವ ಬೆಳ್ಳಿ ಆಭರಣ
- ಮಲ್ಟಿ ಕಲರ್ ಹರಳು, ಮುತ್ತು ಬಳಸಿರುವ ದೊಡ್ಡ, ದೊಡ್ಡ ಹಾರಗಳು

### ಟ್ರೈಬಲ್ ಜ್ಯುವೆಲ್ಲರಿ

ಕಾಟನ್ ಸೀರೆ, ಚೂಡಿದಾರ್, ರೇಷ್ಮೆ ಸೀರೆ, ಲೆಹೆಂಗಾ ಹೀಗೆ ಎಲ್ಲದಕ್ಕೂ ಬೆಳ್ಳಿ ಆಭರಣ ಹೊಂದಿಕೊಳ್ಳುತ್ತದೆ. ಉಡುಪಿಗೆ ತಕ್ಕ ಹಾಗೆ ಆರಿಸಿಕೊಳ್ಳಬೇಕು. ಕಾಟನ್ ಸೀರೆಗೆ ಎಲ್ಲಾ ಬೆಳ್ಳಿ ಆಭರಣಗಳು ಹೊಂದಿಕೊಳ್ಳುತ್ತವೆ. ಆದರೆ ರೇಷ್ಮೆ ಸೀರೆಗೆ ಬೆಳ್ಳಿ ಬಣ್ಣದ ಜರಿ ಇದ್ದರೆ ಮಾತ್ರ ಬೆಳ್ಳಿ ಆಭರಣ ಸೂಕ್ತ. ಆಕ್ಸಿಡೈಸ್ಡ್ ಫಿನಿಶ್ ಆಭರಣಗಳು ಕಪ್ಪು, ಕೆಂಪು, ಮೆರೂನ್, ಬಿಳಿ, ಪಿಂಕ್ ಸೀರೆಗಳಿಗೆ ಹೊಂದಿಕೊಳ್ಳುತ್ತದೆ. ರೋಸ್ ಗೋಲ್ಡ್ ಬೆಳ್ಳಿ ಆಭರಣ ಎಲ್ಲಾ ರೀತಿಯ ರೇಷ್ಮೆ ಸೀರೆಗೆ, ಮಕ್ಕಳಿಗೆ ಯುವತಿಯರಿಗೆ, ಎಲ್ಲಾ ಉಡುಪುಗಳಿಗೂ ಚೆನ್ನಾಗಿ ಕಾಣುತ್ತದೆ. ರೋಸ್ ಗೋಲ್ಡ್ ಫಿನಿಶ್ ಈಗಿನ ಟ್ರೆಂಡ್. ಇದಕ್ಕೆ ಈಗ ಬಹಳ ಬೇಡಿಕೆ ಇದೆ. ಶುಭ ಸಮಾರಂಭಕ್ಕೆ, ಮೀಟಿಂಗ್, ನಿತ್ಯ ಬಳಕೆಗೆ ಬೆಳ್ಳಿ ಆಭರಣ ಅವರವರ ಭಾವಕ್ಕೆ ಹೊಂದಿಕೊಳ್ಳುವಂತೆ ಆರಿಸಬೇಕು.

## ಪುರುಷರನ್ನೂ ಸೆಳೆವ ಬೆಳ್ಳಿ ಒಡವೆ

ಕಾಲೇಜು ಹುಡುಗರು, ಕಚೇರಿಗೆ ತೆರಳುವ ಯುವಕರು, ಪ್ರವಾಸ ಹೋಗುವ ಯುವಜನರು ಬೆಳ್ಳಿಯ ಸರ, ಉಂಗುರ, ಬ್ರೇಸ್ಲೆಟ್, ಒಂದೇ ಕಿವಿಯೋಲೆ ಧರಿಸಿ ಫ್ಯಾಷನ್ ಮೆರೆಯುವುದಿದೆ. ಈಗೀಗ ಬೆಳ್ಳಿ ಆಭರಣಗಳನ್ನು ಪುರುಷರು ಧರಿಸುವುದು ಟ್ರೆಂಡ್ ಕೂಡ ಆಗಿದೆ. ಇದರಿಂದ ಸಣ್ಣಪುಟ್ಟ ಒಡವೆ ವಿನ್ಯಾಸಕಾರರಿಗೆ ಒಂದಿಷ್ಟು ವಹಿವಾಟಿನ ಅವಕಾಶ ಸಿಕ್ಕಿದಂತಾಗಿದೆ.

ಬಂಗಾರದ ಬೆಲೆ ವಿಪರೀತ ಏರಿರುವ ಹಿನ್ನೆಲೆಯೂ ಬೆಳ್ಳಿಯತ್ತ ಆಕರ್ಷಣೆ ಹೆಚ್ಚಾಗಲು ಕಾರಣವಾಗುತ್ತಿದೆ ಎಂಬುದು ವರ್ತಕರ ಅಭಿಪ್ರಾಯ. ಪ್ರಸ್ತುತ ಫ್ಯಾಷನ್ ಪ್ರಪಂಚದಲ್ಲಿ ಪುರುಷರಿಗೆ ಬೆಳ್ಳಿ ಆಭರಣಗಳು ಇಷ್ಟವಾಗುತ್ತಿವೆ. ಇದರಲ್ಲೂ ಕ್ಲಾಸಿಕ್, ಆಧುನಿಕ ಶೈಲಿಯ ಒಡವೆಗಳು ಬಂದಿದ್ದು, ಯುವಕರಿಗೆ ಆಯ್ಕೆ ಹೆಚ್ಚಿದೆ.

ಬೆಳ್ಳಿ ಆಭರಣಗಳನ್ನು ಡೆನಿಮ್ ಶರ್ಟ್ ಅಥವಾ ಫಾರ್ಮಲ್ ಉಡುಪಿನ ಮೇಲೆ ಧರಿಸಬಹುದು. ಬೆಳ್ಳಿ ಕಡಗ, ಉಂಗುರ, ಸರ ಮುಂತಾದವು ಸಖತ್ ಲುಕ್ ನೀಡುತ್ತದೆ. ಹೀಗಾಗಿ ಪುರುಷಪಡೆ ಬೆಳ್ಳಿ ಒಡವೆಯತ್ತ ಚಿತ್ತ ಹರಿಸಿದ್ದಾರೆ.





### ಆ್ಯಂಟಿಕ್ ಒಡವೆ

ಬೆಳ್ಳಿಯಲ್ಲೂ ಹಲವು ವಿನ್ಯಾಸದ ಆ್ಯಂಟಿಕ್ ಆಭರಣಗಳು ಇವೆ. ದೇವಿಯ ಭಂಗಿ, ಹೂಗಳು, ಎಲೆಗಳು, ಕಣ್ಣುಗಳನ್ನು ಹೊಂದಿದ ಅಂದವಾದ ಕೆಲವು ದೇವರ ವಾಹನಗಳು (ಹಕ್ಕಿ, ಪ್ರಾಣಿಗಳು). ಆ್ಯಂಟಿಕ್ ಫಿನಿಶ್ ಅಂದಾಕ್ಷಣ ಆಭರಣಗಳು ಚೋಕರ್ ರೂಪದಲ್ಲಿ, ಹಾರ, ನೆಕ್ಲೇಸ್ ಎಲ್ಲಾ ರೂಪದಲ್ಲೂ ಇವೆ. ಆಭರಣ ದೊಡ್ಡದಾಗಿ ಇದ್ದಾಗವಷ್ಟೇ ಕಣ್ಣು ಕೋರೈಸುವ ಸೌಂದರ್ಯ ನಮ್ಮದಾಗುತ್ತದೆ.

**ಹವಳ ಪೋಣಿಸಿದ ಸರ/ಪೆಂಡೆಂಟ್‌ಗಳು:** ಸಾಮಾನ್ಯವಾಗಿ ಬೆಳ್ಳಿಯ ಹೊಳಪಿಗೆ ಈ ಹವಳ ಬಹಳ ಹೊಂದಿಕೊಳ್ಳುತ್ತದೆ. ಯಾವಾಗಲೂ ವಿರುದ್ಧ ಬಣ್ಣಗಳನ್ನು ಬಳಸಿ ಆಭರಣ ತಯಾರಿಸಬೇಕು. ಆಗ ವಿನ್ಯಾಸ ಹೈಲೈಟ್ ಆಗಿ ಚಂದ ಕಾಣುತ್ತದೆ.

**ರೂಬಿ/ಎಮರಾಲ್ಡ್ ಹೋಲಿಕೆಯ ಹರಳು ಹಾಕಿದ ಆಭರಣಗಳು:** ಯಾವಾಗಲೂ ಆಭರಣಗಳ ಕೆಳಗೆ ಜಾಲರಿ, ಗೊಂಚಲುಗಳಲ್ಲಿ ಒಂದಷ್ಟು ಮಣಿಗಳು ಗುಂಡಾಗಿದ್ದು ಓಲಾಡುತ್ತಿರಬೇಕು. ಅದರ ಅಂದವೇ ಬೇರೆ. ಇಲ್ಲಿ ರೂಬಿ ಬಣ್ಣದ, ಎಮರಾಲ್ಡ್ ಬಣ್ಣದ ಹರಳುಗಳು ಬಂದಾಗ ಮೋಹಕವಾಗಿ ಆಧುನಿಕ ಆಭರಣಗಳಂತೆ ಕಾಣುತ್ತವೆ. ರಿಚ್ ಲುಕ್ ಬರುತ್ತದೆ.

**ನೂಲಿನಲ್ಲಿ ಹೆಣೆದು ಮಾಡಿದ ಆಭರಣ:** ಇದೀಗ ನೂಲಿನಲ್ಲಿ ಗಂಟುಗಳನ್ನು ಹಾಕಿ ಅದರಲ್ಲಿ ಬೆಳ್ಳಿಯ ಸಣ್ಣ ಸಣ್ಣ ಪೆಂಡೆಂಟ್, ಗುಂಡುಗಳನ್ನು ಪೋಣಿಸಿ ಆಭರಣ ತಯಾರಿಸಿ ಧರಿಸುವುದು ಫ್ಯಾಷನ್ ಆಗಿದೆ. ಇದರಲ್ಲಿ ಫ್ಲೆಕ್ಸಿಬಲ್ ಆಗಿರುವ ಒಡವೆಯೂ ಇದೆ. ಇದು ಅಲುಗಾಡದಂತೆ ಕುತ್ತಿಗೆಯಲ್ಲಿ ಗಟ್ಟಿಯಾಗಿ ನಿಲ್ಲುವುದು. ಇದೇ ಹಿಂಬದಿ ಹುಕ್ ಅಥವಾ ಬಳ್ಳಿಯಲ್ಲಿಯೋ ಅವರವರ ಕುತ್ತಿಗೆಗೆ ಹೊಂದುವಂತೆ ಟೈಟ್ ಹಾಗೂ ಸಡಿಲ ಮಾಡಬಹುದು.

**ಫ್ಲೆಕ್ಸಿಬಲ್ ರಿಂಗ್ ಚೈನ್ ಅಳವಡಿಸಿದ ಸರ:** ರಿಂಗ್ ಒಂದರೊಳಗೆ ಒಂದು ಇದ್ದು ಹೆಣೆಯಬೇಕು. ಈ ರಿಂಗ್‌ಗಳಲ್ಲಿ ಒಂದು ಜಾಲರಿ, ಪೆಂಡೆಂಟ್‌ಅಥವಾ ಇನ್ನಾವುದಾದರೂ ಹೂವಿನ, ಹಕ್ಕಿ ವಿನ್ಯಾಸಗಳನ್ನು ಸೇರಿಸಿ ಸರ ಮಾಡಬಹುದು. ಇದು ಯುವತಿಯರಿಗೆ ಬಹಳ ಅಚ್ಚುಮೆಚ್ಚು.

**ಪೈಪ್‌ನಂತಹ ವಿನ್ಯಾಸದ ಆಭರಣ:** ಬೆಳ್ಳಿಯಲ್ಲಿ ಈ ವಿನ್ಯಾಸದ ಆಭರಣ ಬಹಳ ಪ್ರಸಿದ್ಧ. ಏಕೆಂದರೆ ಇದು ಶರೀರಕ್ಕೆ, ಚರ್ಮಕ್ಕೆ ಹಿತವಾಗಿರುತ್ತದೆ. ಕುತ್ತಿಗೆಯಲ್ಲಿ ಸರ ಆಗಲಿ, ನೆಕ್ ಪೀಸ್ ಆಗಿರಲಿ, ಕಾಲ್ಗೆಜ್ಜೆ ಆಗಿರಲಿ ಹಿತವಾಗಿರುತ್ತದೆ. ಇದು ತುಂಡಾಗುವುದು ಕಡಿಮೆ. ಜೊತೆಗೆ ಬ್ಯಾಗ್‌ನಲ್ಲಿ ತೆಗೆದುಕೊಂಡು ಹೋಗುವುದು ಸುಲಭ.

**ಫಳಫಳ ಹೊಳೆಯುವ ಆಭರಣ:** ಬೆಳ್ಳಿ ಆಭರಣವನ್ನು ಈಗ ವಜ್ರದ ಹರಳುಗಳನ್ನು ಸೆಟ್ ಮಾಡುವಂತೆ ಕೌಶಲದಿಂದ ಮಾಡುತ್ತಾರೆ.

**ಮಲ್ಟಿ ಕಲರ್ ಹರಳು ಮತ್ತು ಮುತ್ತು ಬಳಸಿದ ದೊಡ್ಡ ದೊಡ್ಡ ಹಾರಮ್:** ಯಾವುದೇ ಲೋಹಕ್ಕೆ ಜೊತೆಯಾಗಿ ಹರಳು, ಮುತ್ತು ಸೇರಿದಾಗ ಆ ಲೋಹದ ಶ್ರೇಷ್ಠತೆ ಹೆಚ್ಚುತ್ತದೆ. ಅದರ ಸೌಂದರ್ಯ ಇಮ್ಮಡಿಸುತ್ತದೆ. ಇದು ಎಲ್ಲಾ ತರಹದ ಡ್ರೆಸ್‌ಗಳಿಗೂ ಚೆಂದ.